(ಮೊದಲನೆ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾಪದ ಅಂಗೀಕಾರ

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) ಮಾನ್ಯ ಉಪಾಧ್ಯಕ್ಷರೇ, ''1994ರ ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಉಪಾಧ್ಯಕ್ಷರು :- ಪ್ರಸ್ತಾಪ ಏನೆಂದರೆ ''1994 ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ವಿಷಯ :- ನಗರಾಭಿವೃದ್ಧಿ ಇಲಾಖೆಯಲ್ಲಿ ನಡೆದಿರತಕ್ಕ ಅವ್ಯವಹಾರಗಳ ಬಗ್ಗೆ

ಶ್ರೀ ಸಿ.ಬೈರೇಗೌಡ (ವೇಮಗಲ್) :- ಮಾನ್ಯ ಉಪಾಧ್ಯಕ್ಷರೆ, ಇವತ್ತು ಬೆಳಗ್ಗೆ ನಾನು ಪೂರಕ ಬೇಡಿಕೆಗಳ ಮೇಲೆ ಚರ್ಚೆಯಾಗುವ ಸಂದರ್ಭದಲ್ಲಿ ನಗರಾಭಿವೃದ್ಧಿ ಇಲಾಖೆಯಲ್ಲಿ ನಡೆದಿರತಕ್ಕ ಅವ್ಯವಹಾರದ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದೆ. ಮತ್ತು ಇದಕ್ಕೆ ಸಂಬಂಧಪಟ್ಟ ಪತ್ರವನ್ನು ಕೂಡ ಅಧಿಕೃತವಾದಂಥ ದಾಖಲೆಗಳನ್ನು ಕೂಡ ಮಾನ್ಯ ಮಂತ್ರಿಗಳಿಗೆ ಕಳುಹಿಸಿದ್ದೆ. ಆಗ ಮುಖ್ಯಮಂತ್ರಿಗಳು ಇರಲಿಲ್ಲ. ನಿಮಗೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ -2 ಆಗಿರತಕ್ಕ ಸುಧೀರ್‌ಕುಮಾರ್ ಅವರು ಜುಲೈ 13, 1994ರಲ್ಲಿ ಒಂದು ವಿವರವಾದ ಟಿಪ್ಪಣಿಯನ್ನು ಕಳುಹಿಸಿದ್ದಾರೆ. ಅದು ತಲೆಯ ಮೇಲೆ ಮಲ ಹೊರತಕ್ಕ ಪದ್ಧತಿ ಏನಿತ್ತು ಅದನ್ನು ನಿರ್ಮೂಲನ ಮಾಡುವುದಕ್ಕೆ ಫ್ಲಷ್ ಲೆಟ್ರಿನ್ಸ್ ಕಟ್ಟುವುದರಲ್ಲಿ ನಡೆದಿರುವ ಹಣ ದುರುಪಯೋಗದ ಬಗ್ಗೆ ಅದಕ್ಕೆ ಸುಮಾರು 27-28 ಕೋಟಿ ರೂಪಾಯಿ ಹಣ ಬಿಡುಗಡೆಯಾಗಿದೆ. ಅದರಲ್ಲಿ 20 ಕೋಟಿ ರೂಪಾಯಿ ಹಣ ದುರುಪಯೋಗವಾಗಿದೆ. ಅದರ ಬಗ್ಗೆ ಸ್ಪಷ್ಟವಾದಂಥ ಒಂದು ವರದಿಯನ್ನು ಗುರುತರವಾದ ಜವಾಬ್ದಾರಿ ಇರತಕ್ಕ ಅಧಿಕಾರಿ, ಅದೂ ಸರ್ಕಾರದ ಕಾರ್ಯದರ್ಶಿ-2 ಆಗಿರುವವರು ಕಳುಹಿಸಿದ್ದಾರೆ. ಇಲ್ಲಿಯವರೆಗೆ ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು ಕೊಟ್ಟಂಥ ವರದಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ಒಂದು ಅವಕಾಶ ಕೊಡಬೇಕೆಂದು ಹೇಳಿದರು.

9.00 ಪಿ.ಎಂ

ಶ್ರೀ ಎಂ.ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) ಆ ವರದಿ ಬಂದ ಕೂಡಲೇ ನಾವು ಆ ಬಗ್ಗೆ ಸಿಓಡಿಗೆ ತನಿಖೆಗೆ ಕಳುಹಿಸಿದ್ದೇವೆ. ಸಿಓಡಿ ಎನ್‌ಕ್ವೈರಿ ಬಗ್ಗೆ ಹೋಮ್ ಡಿಪಾರ್ಟ್‌ಮೆಂಟ್‌ಗೆ ಆರ್ಡರ್ ಕೂಡ ಮಾಡಿದ್ದೇವೆ.

ಶ್ರೀ ಸಿ ಬೈರೇಗೌಡ : ಇನ್ನೊಂದು ವಿಷಯದಲ್ಲಿ ಇಲಾಖೆಯ ಮುಖ್ಯಸ್ಥರಾಗಿರತಕ್ಕವರು. ಅವರ ಮೇಲೆ ಕೂಡ ಒಂದು ಪ್ಯಾರಾವನ್ನು ಓದುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ಸಭೆಯ ಹೆಚ್ಚಿನ ವೇಳೆ ನಾನು ಪಡೆಯಲು ಇಚ್ಛೆಪಡುವುದಿಲ್ಲ.

''ಪೌರಾಡಳಿತ ನಿರ್ದೇಶಕರಾದ ಶ್ರೀ ಎಂ.ಜಿ.ಹಾಲಪ್ಪನವರ, ಅಖಿಲಭಾರತ ಸೇವೆ, ಶ್ರೀ ರಾಮಸ್ವಾಮಿ, ಉಪನಿರ್ದೇಶಕರು, ಅಕೌಂಟ್ಸ್ ಮತ್ತು ಆಡಿಟ್, ಪೌರಾಡಳಿತ ನಿರ್ದೇಶನಾಲಯ, ಹಾಲಿ ರಜೆಯ ಮೇರೆಗೆ, - ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೌರಾಡಳಿತ ನಿರ್ದೇಶನಾಲಯದ ಇತರ ಸಿಬ್ಬಂದಿವರ್ಗ ಮತ್ತು ಸಂಬಂಧಪಟ್ಟ ಪುರಸಭೆಗಳ ಮುಖ್ಯ ಅಧಿಕಾರಿಗಳು ಮತ್ತು ತಾಂತ್ರಿಕ ಸಿಬ್ಬಂದಿ ಮೇಲೆ ಲಗತ್ತಿಸಲಾದ ಟಿಪ್ಪಣಿಯಲ್ಲಿ ಹೇಳಿರುವ ವಿಷಯಗಳಲ್ಲಿ ವಿಶೇಷವಾಗಿ ಖಂಡಿಕೆ 36 ಮತ್ತು 44 ರಿಂದ 48 ಆಧಾರದ ಮೇಲೆ ಶಿಸ್ತಿನ ಕ್ರಮ ಜರುಗಿಸುವುದು''

ಎಂದು ಹೇಳಿದ್ದಾರೆ. ಇದು ತಮ್ಮ ಇಲಾಖೆಯ ಕಾರ್ಯದರ್ಶಿಗಳು ತಮಗೆ ಕಳುಹಿಸಿರತಕ್ಕ ಟಿಪ್ಪಣಿ. ಅವರು ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಸಿಓಡಿ ಎನ್‌ಕ್ವೈರಿ ಏನಿದೆ? ಅಲ್ಲಿಗೆ ನೀವು ಯಾರಾದರೂ ದಕ್ಷರಾಗಿರತಕ್ಕ ಅಧಿಕಾರಿಗಳನ್ನು ಹಾಕಬೇಕು. ಮೊನ್ನೆ ದಿವಸ ನಾನು ಇಲ್ಲೇ ಪ್ರಸ್ತಾಪ ಮಾಡಿದ್ದೇನೆ. ಇವರು ಏನು ಮಾಡುತ್ತಿದ್ದಾರೆ ಎಂದರೆ, ಕೆಲವನ್ನು ಉದ್ದೇಶಪೂರ್ವಕವಾಗಿ ಮುಚ್ಚುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇಲ್ಲಿ ಸರ್ಕಾರದ ಕಾರ್ಯದರ್ಶಿಗಳು ಕಳುಹಿಸಿರತಕ್ಕ ಟಿಪ್ಪಣಿ ಮೇಲೆ ಸಿಓಡಿ ತನಿಖೆ ಏಕೆ ಬೇಕು? ಇಂತಹವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇವತ್ತು ತಾವು ಸಂಪುಟದ ಉಪಸಮಿತಿಗಳನ್ನು ರಚನೆ ಮಾಡಿ ಕೆಲವು ಭೂಹಗರಣಗಳನ್ನು ಅಲ್ಲಿ ಸಮಾಧಿ ಮಾಡತಕ್ಕಂತಹ ಕೆಲಸ ಮಾಡುತ್ತಿದ್ದೀರಿ. ತಮಗೆ ಯಾವುದು ಇಷ್ಟ ಇದೆಯೋ ಅದರ ಬಗ್ಗೆ ತಾವು ಸರ್ಕಾರ ಬಹಳ ಟ್ರಾನ್ಸ್‌ಫರೆನ್ಸಿ ಎಂದು ಎಲ್ಲಾ ಮಾತನಾಡುತ್ತೀರಿ. ಇಷ್ಟ ಇಲ್ಲದ ಕಡೆಯಲ್ಲಿ ಮುಚ್ಚಿಹಾಕುವಂತಹ ಕೆಲಸ ಮಾಡುತ್ತೀರಿ.

ಉಪಾಧ್ಯಕ್ಷರು : - ಮಾನ್ಯ ಬೈರೇಗೌಡರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬೈರೇಗೌಡ :-ಕಾರ್ಯದರ್ಶಿಗಳು ಕಳುಹಿಸಿರುವ ಟಿಪ್ಪಣಿ ಬಗ್ಗೆ ಶಿಸ್ತಿನ ಕ್ರಮ ಏನು ಕೈಗೊಂಡಿದ್ದೀರಿ?

ಶ್ರೀ ಎಂ ವೀರಪ್ಪಮೊಯಿಲಿ :- ಈಗ ನಾವು ಈ ವಿಚಾರವನ್ನು ಸಿಓಡಿಗೆ ಕಳುಹಿಸಿದ್ದುದು ತಮಗೆ ಹಿತವಾಗಲಿಲ್ಲ. ಅದಕ್ಕೇ ನಾವು ಹೆಲ್ಪ್ ಮಾಡುವುದಿಲ್ಲ. ಸಿಓಡಿ ಎನ್‌ಕ್ವೈರಿ ಎಂದರೆ ಸ್ಪೆಸಿಫಿಕ್ಕಾಗಿ ಯಾರು ಯಾರ ಜವಾಬ್ದಾರಿ ಎಷ್ಟೆಷ್ಟು ಇದೆ ಏನೇನು ಇದೆ ಎಂದು ಹೇಳಿ ನೋಡಬೇಕಾಗುತ್ತದೆ. ಯಾರಾದರೂ ಅವ್ಯವಹಾರ ಮಾಡಿದ್ದರೆ ಮಿಸ್ ಅಪ್ರೋಷಿಯೇಷನ್ ಮಾಡಿದ್ದರೆ ಕಣ್ಣುಮುಚ್ಚಿ ಪ್ರಾಸಿಕ್ಯೂಟ್ ಮಾಡುವುದಕ್ಕೆ ಆಗುತ್ತದೆಯೇ? ಅದಕ್ಕೇ ಹೇಳಿದ್ದು, ಈ ಬಗ್ಗೆ ಒಂದು ಪ್ರೋಸೀಜರ್ ಇದೆ. ಸಿಓಡಿಯವರು ಮಾಡಲಿ. ತಾತ್ಕಾಲಿಕವಾದ ರಿಪೋರ್ಟ್ ಬರಲಿ. ರಿಪೋರ್ಟ್ ಬಂದಮೇಲೆ ಯಾರು ಯಾರ ಮೇಲೆ ಎಷ್ಟೆಷ್ಟು ಹೊಣೆ ವಹಿಸಬೇಕು, ಮುಂದುವರಿಯಬೇಕು ಎನ್ನುವ ಬಗ್ಗೆ ನಾವು ಹೆಸಿಟೇಟ್ ಮಾಡುವುದಿಲ್ಲ.

ಕಾರ್ಯದರ್ಶಿಯವರಿಂದ ಬಂದ ಟಿಪ್ಪಣಿಯನ್ನು ನಾನು ಮುಚ್ಚಿ ಹಾಕಿದ್ದರೆ ಇದೆಲ್ಲಾ ಭಾಷಣ ತಾವು ಮಾಡುವುದಕ್ಕೆ ಅವಕಾಶ ಇತ್ತು. ಆದರೆ ವರದಿ ನನಗೆ ಬಂದಕೂಡಲೇ ಸಿಓಡಿ ಎನಕ್ಕೊಯರಿಗೆ ಹಾಕಿದೆ. ಅಲ್ಲಿಂದ ಪ್ರಿಲಿಮನರಿ ರಿಪೋರ್ಟ್ ಬರಲಿ. ತಾವು ಬಯಸುತ್ತೀರಿ, ಅವರು ಹೇಳಿದ ಕೂಡಲೇ ನೀವು ಶಿಕ್ಷೆ ಕೊಡಿ ಎಂದು ಹೇಳತಕ್ಕ ಕ್ರಮ ಸರಿಯಲ್ಲ. ಏನು ಮಾಡುವುದು, ಇದು ಡೆಮಾಕ್ರಸಿ. ಸರ್ಕಾರದಲ್ಲಿ ಒಂದು ಕ್ರಮ ಇರುತ್ತದೆ. ಇದೇನೂ ಮಿಲ್ಟ್ರಿ ಆಡಳಿತ ಅಲ್ಲ. ಆದ್ದರಿಂದ ಇದೆಲ್ಲಾ ಕೆಲವು ಕ್ರಮಗಳು ಇರುತ್ತವೆ. ತಾವು ತಾಳ್ಮೆಯಿಂದ ಸ್ವಲ್ಪ ಕಾಯಬೇಕಾಗುತ್ತದೆ. ತಮಗೆ ಇಚ್ಛೆ ಇರುತ್ತದೆ, ನೀವು ಹೇಳಿದ ಕೂಡಲೇ ಶಿಕ್ಷೆ ಮಾಡಬೇಕು ಎಂದು. ವಿರೋಧಿಪಕ್ಷದಲ್ಲಿ ಇದ್ದುಕೊಂಡು ಇದನ್ನೇ ಕಸುಬು ಮಾಡಿಬಿಟ್ಟರೆ ಮತ್ತೆ ಏನು ಮಾಡುವುದಕ್ಕೆ ಬರುತ್ತದೆ? ಆದ್ದರಿಂದ....

ಶ್ರೀ ಸಿ ಭೈರೇಗೌಡ :- ಇಲ್ಲಿ ನಿಂತು ನಮ್ಮ ಕರ್ತವ್ಯವನ್ನು ನಾವು ಮಾಡುತ್ತೇವೆ. ನೀವೂ ಅಲ್ಲಿ ಕುಳಿತು ನಿಮ್ಮ ಕಸಬು ಮಾಡಿದ್ದರಿಂದಲೇ ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿ ಬಂದಿದ್ದು.

ಶ್ರೀ ಎಂ. ವೀರಪ್ಪ ಮೊಯಿಲಿ :- ಇನ್ನು ಕ್ಯಾಬಿನೆಟ್ ಉಪಸಮಿತಿಯನ್ನು ಮಾಡಿ ಏನೂ ಅಡಗಿಸಲಿಲ್ಲ.

ಶ್ರೀ ಸಿ.ಭೈರೇಗೌಡ :- ಹಾಗಿದ್ದರೆ ಎಷ್ಟು ಸಾರಿ ಸಭೆ ಸೇರಿದ್ದೀರಿ? ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ :- ದಯಮಾಡಿ ಹಗುರವಾಗಿ ಮಾತನಾಡಬೇಡಿ. ಉಪಸಮಿತಿ ಒಂದು ಜವಾಬ್ದಾರಿಯುತವಾದ ಸಮಿತಿ. ಯಾವುದನ್ನೂ ಯಾರನ್ನೂ ಮುಚ್ಚಿಡತಕ್ಕ ಪ್ರಶ್ನೆ ಇಲ್ಲ. ಆಪಾದನೆ ಎಷ್ಟು ಸತ್ಯವೋ ಅಥವಾ ಅಸತ್ಯಸತ್ಯಯವೋ ಎನ್ನುವುದನ್ನೂ ಸಹಾ ವಿಚಾರ ಮಾಡಬೇಕಾಗುತ್ತದೆ. ಒಮ್ಮೆಲೇ ತಾವು ಹೇಳಿದ್ದುದು ವೇದವಾಕ್ಯ, ಬಾಕಿಯವರು ಹೇಳಿದ್ದುದು ಸರಿಯಲ್ಲ ಎಂದು ಹೋಗಬೇಡಿ. ತಾವು ಹೇಳತಕ್ಕದ್ದು ಖಂಡಿತಾ ವೇದವಾಕ್ಯ ಅಲ್ಲ. ಅದು ಬೈರೇಗೌಡರ ಉಪಾಚ. ಬೈರೇಗೌಡರ ಉಪಾಚ ಎಂದಮೇಲೆ ಸ್ವಲ್ಪ ಟೆಸ್ಟ್ ಕೂಡ ಮಾಡಬೇಕಾಗುತ್ತದೆ. ಇದು ಎಷ್ಟು ಮಟ್ಟಿಗೆ ಸತ್ಯ, ಮತ್ತೊಂದು ಇನ್ನೊಂದು ಎಂದು ಹೇಳಬೇಕಾಗುತ್ತದೆ. ಆದ್ದರಿಂದ ನೀವು ಹೇಳಿದಿರಿ ಎಂದು ಹೇಳಿ...

ಶ್ರೀ ಸಿ ಬೈರೇಗೌಡ : ಇದನ್ನು ನಿಮ್ಮ ಕಾರ್ಯದರ್ಶಿಗಳು ಹೇಳಿದ್ದುದು ನಾನು ಹೇಳಿದ್ದುದು ಅಲ್ಲ.

ಶ್ರೀ ಎಂ ವೀರಪ್ಪ ಮೊಯಿಲಿ :- ಇವತ್ತು ತಾವು ತಾಳ್ಮೆಯಿಂದ ಇರಿ. ನಮ್ಮ ಸರ್ಕಾರದ ಮಟ್ಟಿಗೆ ಹೇಳುವುದು ಇದ್ದರೆ, ನಾನು ಅಧಿಕಾರವನ್ನು ವಹಿಸಿಕೊಂಡ ನಂತರ ಯಾವುದೇ ವಿಚಾರವನ್ನು ನಾವು ಮುಚ್ಚಿಟ್ಟಿಲ್ಲ. ಕಾನೂನು ಪ್ರಕಾರ ನಾನು ಹೇಳಿದ್ದುದು law will take its own course. I am not going to defend or shield anybody. ಉಪ್ಪು ತಿಂದವರು ನೀರು ಕುಡಿದೇ ಕುಡಿಯುತ್ತಾರೆ. We are not shielding anybody.

ಆದ್ದರಿಂದ, ಆ ಕಾಲ ಹೊರಟುಹೋಯಿತು. ಹಿಂದೆ ಯಾರು ಏನು ಮಾಡಿದರೂ ಕೂಡ ನಡೆಯೋದು. ಈಗ ಹೊರಟುಹೋಗಿದೆ. ತಮ್ಮ ಅಧಿಕಾರದ ಕಾಲದಲ್ಲಿ ಎಷ್ಟು ಸ್ಕ್ಯಾಂದಲ್ಸ್ ಬರಲಿಲ್ಲ? ಆಗ ಎಷ್ಟು ಜನ ಮನೆಗೆ ಹೋಗಬೇಕಾಗಿತ್ತು ಎಂಬುದನ್ನು ಆಲೋಚನೆ ಮಾಡಿ ಕೊಳ್ಳಿ. ಪಾಪ ರಾಮಕೃಷ್ಣ ಹೆಗಡೆಯವರು ಒಬ್ಬರೇ ಹೋದರು ಒಮ್ಮೆ. ಒಮ್ಮೆ ರಿಸೈನ್ ಮಾಡಿದರು, ಪುನಃ ಬಂದರು. ಸನ್ಮಾನ್ಯ ದೇವೇಗೌಡರ ಮೇಲೆ ಎಷ್ಟು ಬರಲಿಲ್ಲ? ಎಲ್ಲಾ ಬಂದಿದೆ. ಆದ್ದರಿಂದ ಈ ಕಡೆಗೆ ತಾವು ಪಾಠ ಹೇಳಲಿಕ್ಕೆ ಹೋಗಬೇಡಿ. ನಾವು ಏನು ಇದ್ದರೂ ಕೂಡ ಬ್ಲಾಕ್ ಆಂಡ್ ವೈಟ್. ಆದ್ದರಿಂದ ತಾವು ನಮಗೆ ಹೇಳಲು ಹೋಗಬೇಡಿ.

ಶ್ರೀ ಸಿ. ಬೈರೇಗೌಡ :- ಇಲ್ಲಿ ಸರ್ಕಾರದ ಕಾರ್ಯದರ್ಶಿಗಳೇ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ.ಇದರ ಬಗ್ಗೆ ಹೇಳಿ. ಯಾವುದಕ್ಕೆ ಯಾವುದೋ ಉತ್ತರ ಕೊಡಲು ಹೋಗಬೇಡಿ.

ಉಪಾಧ್ಯಕ್ಷರು :- ಇಲ್ಲಿಗೆ ಈ ಚರ್ಚೆ ಮುಕ್ತಾಯವಾಯಿತು.

Reg : Strike by the non teaching college of College

ಶ್ರೀ ಆರ್ ದೇಶಪಾಂಡೆ :- (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರು ಉನ್ನತ ಶಿಕ್ಷಣ ಸಚಿವರು ಇಲ್ಲೇ ಇದ್ದಾರೆ. ನಾನು ಬೆಳಗ್ಗೆ ಒಂದುವಿಚಾರ ಹೇಳಿದ್ದೆ. The non-teaching staff of colleges are on strike. I have raised this in the morning. There is not much financial burden. Why not you call them for a discussion which will solve the problem?

Sri S.M.Yahya :- I am happy to say that we have solved their problem. Yesterday they have called off the strike.

ಉಪಾಧ್ಯಕ್ಷರು :- ಈಗ ಶಾಸನಾತ್ಮಕ ನಿರ್ಣಯಗಳು.

ಈಗ ಶಾಸನಾತ್ಮಕ ನಿರ್ಣಯಗಳು

1. **ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು 1993-94ನೇ ಸಾಲಿಗೆ ಹಾಗೂ 1994-95ನೇ ಸಾಲಿನಲ್ಲಿ ಸಾಲವನ್ನು ಪಡೆದುಕೊಳ್ಳಲು ಗರಿಷ್ಠ ಮೊತ್ತವನ್ನು ಹೆಚ್ಚಿಸುವ ಬಗ್ಗೆ (ಕೇಂದ್ರ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ 1948 ರ ಕೆಳಗೆ) ನಿರ್ಣಯ.**

ಶ್ರೀ ವಿ. ಮುನಿಯಪ್ಪ :(ಇಂಧನ ಖಾತೆ ರಾಜ್ಯ ಸಚಿವರು) :- ಮಾನ್ಯ ಅಧ್ಯಕ್ಷರೇ,. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು 1993-94ನೇ ಸಾಲಿಗೆ ಹಾಗೂ 1994-95ನೇ ಸಾಲಿನಲ್ಲಿ ಸಾಲವನ್ನು ಪಡೆದುಕೊಳ್ಳಲು ಗರಿಷ್ಠ ಮೊತ್ತವನ್ನು ಹೆಚ್ಚಿಸುವ ಬಗ್ಗೆ (ಕೇಂದ್ರ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ 1948ರ ಕೆಳಗೆ) ನಿರ್ಣಯವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.